ಅಧ್ಯಕ್ಷರು.— ವರದಿಗಳನ್ನೊಪ್ಪಿಸಲಾಯಿತು.

ಮಂನವಿಗಳನ್ನೊಪ್ಪಿಸುವುದು

ಶ್ರೀ ಜಿ. ಎಸ್. ಆಚಿ ರ್.— ದಕ್ಷಿಣ ಕನ್ನಡ ಜಿಲ್ಲೆ ಕುಂದಾಪುರ ತಾಲ್ಲೂಕಿನ ಬೈಂದೂರ್ ಗ್ರಾಮದ ಪ್ರಥಮ ದರ್ಜೆ ಕಾಲೇಜಿನ ಕಟ್ಟಡದ ನಿರ್ಮಾಣ ಕುರಿತಂ ಮನವಿಯನ್ನೊಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.— ಮನವಿಯನ್ನೊಪ್ಪಿಸಲಾಯಿತು.

ಶ್ರೀ ಪಿ. ಬಿ. ಓಂಕಾರಮೂರ್ತಿ.— ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಕೆ. ಬಿದರೆ ಗ್ರಾಮಕ್ಕೆ ಪಶುವೈದ್ಯ ಶಾಲೆಯ ಮಂಜೂರಾತಿ ಬಗ್ಗೆ ಹಾಗೂ ಹೊಸದುರ್ಗ ತಾಲ್ಲೂಕಿನ ತಂಡಗದಿಂದ ಕಡೂರು ತಾಲ್ಲೂಕಿನ ಪಂಚನಹಳ್ಳಿಯವರೆಗೆ ರಸ್ತೆಯನ್ನು ದುರಸ್ತಿ ಮಾಡುವ ಬಗ್ಗೆ ಮನವಿಗಳನ್ನೊಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.— ಮನವಿಗಳನ್ನೊಪ್ಪಿಸಲಾಯಿತಂ.

ಶ್ರೀ ಜ್ಞಾನದೇವ ದೊಡ್ಡಮೇಟಿ.— ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ತಿಂಗಳಿಗೆ ಕನಿಷ್ಠ ೬೪೨-೮೦ರಿಂದ ಗರಿಷ್ಠ ೩,೦೦೦-೦೦ ರೂಪಾಯಿಗಳವರೆಗೆ ವೇತನವನ್ನು ಗೊತ್ತುಪಡಿಸುವ ಬಗ್ಗೆ ಹಾಗೂ ಧಾರವಾಡ ಜಿಲ್ಲೆ ಕೋಣ ತಾಲ್ಲೂಕಿನ ಗಜೇಂದ್ರಗಡದ ಕೈಮಗ್ಗ ಅಭಿವೃದ್ಧಿ ನಿಗಮದಿಂದ ನೇಕಾರರಿಗೆ ಗೃಹ ನಿರ್ಮಾಣ ಹಾಗೂ ಸಾಮೂಹಿಕ ನೇಯಿಗೆ ಕೇಂದ್ರ ರಚಿಸುವ ಮನವಿಗಳನ್ನೊಪ್ಪಿಸುತ್ತೇನೆ.

ಅಧ್ಯಕ್ಷರು.— ಮನವಿಗಳನ್ನೊಪ್ಪಿಸಲಾಯಿತಂ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.— ಬೆಳಗಾವಿ ಜಿಲ್ಲೆ ಸಂಕೇಶ್ವರ ಮಂತ್ತು ಹುಕ್ಕೇರಿಯ ಕೆಲವು ಹಳ್ಳಿಗಳ ರಸ್ತೆಗಳನ್ನು ದುರಸ್ತಿ ಮಾಡಿ ಡಾಂಬರೀಕರಣ ಮಾಡಲು ಮನವಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು.— ಮನವಿಯನ್ನೊಪ್ಪಿಸಲಾಯಿತು.

Notice under Rule 59

ಅಧ್ಯಕ್ಷರು.— ಶ್ರೀ ಎಂ. ಎಸ್. ಕೃಷ್ಣನ್ ಅವರೇ, ತಾವು ಒಂದು ನೋಟೀಸ್ ಕೊಟ್ಟಿದ್ದೀರಿ. ಅದನ್ನಷ್ಟೇ ಐದು ನಿಮಿಷಗಳಲ್ಲಿ ಓದಿ ಹೇಳಿ ಸ್ವಾಮಿ.

ಶ್ರೀ ಎಂ. ಎಸ್. ಕೃಷ್ಣನ್.— ಅಧ್ಯಕ್ಷರೇ, ನಿಯಮ ೫೯ರ ಪ್ರಕಾರ ನಾನು ನೋಟೀಸ್ ಕೊಟ್ಟಿದ್ದೇನೆ. ಮುಖ್ಯ ಉದ್ದೇಶವೇನೆಂದರೆ, ನಮ್ಮ ಎನ್.ಜಿ.ಇ.ಎಫ್. ಕಾರ್ಖಾನೆ ಏನಿದೆ ಅಲ್ಲಿ ಬಹಳ ಗಂಭೀರ ಪರಿಸ್ಥಿತಿ ಉಂಟಾಗಿದೆ, ಅಂತಹ ಪರಿಸ್ಥಿತಿ ಉಂಟಾಗುವುದಕ್ಕೆ ಕಾರಣ, ಕಳೆದ ಮೂರ್ನಾಲ್ಕು ದಿವಸಗಳಿಂದ ಅಲ್ಲಿನ ಸಂಘದ ಕಾರ್ಯದರ್ಶಿ ಜಗನ್ನಾಥನ್ ಎನ್ನುವವರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ನಾನು ಬೆಳಿಗ್ಗೆ ಹೋಗಿ ಪರಿಸ್ಥಿತಿ ನೋಡಿ ಬಂದಿದ್ದೇನೆ. ಅವರಿಗೆ ರಕ್ತದ ಒತ್ತಡ ಇದ್ದು, ಪಲ್ಸ್ ಕಡಿಮೆಯಾಗುತ್ತಾ ಬರುತ್ತಿದೆ. ಡಾಕ್ಟರ್ ಸಹಾ ಬಂದು ನೋಡಿ ಕೊಂಡು ಹೋಗುತ್ತಿದ್ದಾರೆ. ಅಲ್ಲಿ ಸಾವಿರಾರು ಜನ ಕಾರ್ಮಿಕರು ಸೇರಿದ್ದು ಪರಿಸ್ಥಿತಿ ಉಲ್ಬಣವಾಗುತ್ತಾ ಹೋಗುತ್ತಿದೆ. ಇದಕ್ಕೆಲ್ಲಾ ಕಾರಣವನ್ನು ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಅವರು ಕೆಲವು ಬೇಡಿಕೆಗಳ ಜೊತೆ ಮುಖ್ಯವಾಗಿ ಬೋನಸ್ ಬಗ್ಗೆ, ಮೇನೇಜ್‌ಮೆಂಟ್ ಮುಂದೆ ಡಿಮಾಂಡ್ ಇಟ್ಟಿದ್ದರು. ಆಡಳಿತ ವರ್ಗದವರು ಇದನ್ನು ಇತ್ಯರ್ಥ ಮಾಡುವುದಕ್ಕೆ ಕಾಲಾವಕಾಶ ಇತ್ತು. ದುರಾದೃಷ್ಟವಶಾತ್ ಮೇನೇಜ್‌ಮೆಂಟ್‌ನವರು ಹಠಮಾರಿತನ ತೋರಿಸುತ್ತಿದ್ದಾರೆ. ಅವರು ೨೦ ಪರ್ಸೆಂಟ್ ಬೋನಸ್ ಕೇಳುತ್ತಿದ್ದು, ಇವರು ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಅಲ್ಲಿ ಭಿನ್ನಾಭಿಪ್ರಾಯ ಏನೇ ಇರಲಿ ಅದನ್ನು ಹೋಗಲಾಡಿಸತಕ್ಕದ್ದು ಸರ್ಕಾರಿ ಯಂತ್ರದ ಮೇಲೆ ಇದೆ. ಅಲ್ಲಿಯ ಉತ್ಪಾದನೆ ಬಗ್ಗೆ ಹೇಳಬೇಕೆಂದರೆ, ಲಾಭದ ಬಗ್ಗೆ ಹೇಳಬೇಕೆಂದರೆ, ಕೆಲವು ಅಂಕಿ ಅಂಶಗಳನ್ನು ಇಲ್ಲಿ ಹೇಳಲೇಬೇಕಾಗುತ್ತದೆ. ೧೯೮೨-೮೩ರಲ್ಲಿ ೪೭.೭೧ ಕೋಟಿ, ೧೯೮೩-೮೪ರಲ್ಲಿ ೫೪.೩೭ ಕೋಟಿ, ೧೯೮೪-೮೫ರಲ್ಲಿ ೬೨.೯ ಕೋಟಿ, ೧೯೮೫-೮೬ರಲ್ಲಿ ೭೭.೮೨ ಕೋಟಿ ರೂಪಾಯಿ ಉತ್ಪಾದನೆಯಾಗಿದೆ. ಹಾಗೇ ೧೯೮೨-೮೩ರಲ್ಲಿ ೪೦.೭೦ ಕೋಟಿ, ೧೯೮೩-೮೪ರಲ್ಲಿ ೩೪.೯೬ ಕೋಟಿ, ೧೯೮೪-೮೫

ರಲ್ಲಿ ೯೧. ೯೯ ಕೋಟಿ, ೧೯೮೫-೮೬ರಲ್ಲಿ ೩೧೯ಲಕ್ಷ ರೂಪಾಯಿ ಲಾಭ ಸಹಾ ಬಂದಿದೆ. ಹಿಂದಿನ ವರ್ಷಗಳಲ್ಲಿ ಲಾಭ ಆಗದೇ ಇದ್ದರೂ ಒಂದು ಸಾರಿ ೧೫% ಪರ್ಸೆಂಟ್, ಇನ್ನೊಂದು ಸಾರಿ ೧೭.೫% ಪರ್ಸೆಂಟ್ ಬೋನಸ್ ಕೊಟ್ಟಿದ್ದಾರೆ. ಲಾಭ ಕಡಿಮೆ ಇದ್ದಾಗಲೂ ಬೋನಸ್ ಕೊಟ್ಟಿದ್ದಾರೆ. ಈಗ ಲಾಭ ಬಂದಿದ್ದರೂ ಕೂಡಾ ಬೋನಸ್ ಕೊಡುವುದಿಲ್ಲವೆಂದು ಮೇನೇಜ್‌ಮೆಂಟ್‌ನವರು ಹೇಳುತ್ತಿದ್ದಾರೆಂದು ದೂರಲಾಗಿದೆ. ಆದ್ದರಿಂದ ಪರಿಸ್ಥಿತಿ ಉಲ್ಬಣಗೊಂಡಿದ್ದು, ಫ್ಯಾಕ್ಟರಿ ಒಳಗೂ ಕಾರ್ಮಿಕರು ಘೋಷಣೆ ಕೂಗುತ್ತಿದ್ದು ಹೊರಗೂ ಕೂಡಾ ಅಂತಹ ಪರಿಸ್ಥಿತಿ ಇದ್ದು ಇದು ಇನ್ನೂ ಉಲ್ಬಣಗೊಳ್ಳುವುದಕ್ಕೆ ಬಿಡಬಾರದು. ಯಾವಾಗ ಏನು ಪರಿಸ್ಥಿತಿಯಾಗುತ್ತದೆಂದು ಗೊತ್ತಾಗುತ್ತಿಲ್ಲ. ಪರಿಸ್ಥಿತಿ ಹದ್ದು ವಿಗಾರುವ ಮೊದಲು ಇತ್ಯರ್ಥಮಾಡತಕ್ಕದ್ದು ಸರ್ಕಾರದ ಜವಾಬ್ದಾರಿ ಇದೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಇದ್ದರೂ ಅವಕಾಶ ಇಲ್ಲದಿರುವುದರಿಂದ ಇಷ್ಟು ಮಾತ್ರ ಹೇಳಿದ್ದೇನೆ. ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಎಲ್ಲ ವಿವರಗಳನ್ನು ಹೇಳುತ್ತೇನೆ. ಒಟ್ಟಿನಲ್ಲಿ ಪರಿಸ್ಥಿತಿ ಉಲ್ಬಣವಾಗುತ್ತಿರುವುದರಿಂದ ಆದಷ್ಟು ಜಾಗ್ರತೆ ಇತ್ಯರ್ಥ ಮಾಡಬೇಕೆಂಬ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ. ಆದ್ದರಿಂದ ಈ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುವ ಬಗ್ಗೆ ತೀರ್ಮಾನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಈ ವಿಷಯವನ್ನು ನಾನು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತಿಸಿದ್ದೇನೆ. ಹಾಗೂ ನಿಲುವಳಿ ಸೂಚನೆಗೆ ಅನುಮತಿಯನ್ನು ನಿರಾಕರಿಸಿದ್ದೇನೆ ಇದನ್ನು ಗಮನಸೆಳೆಯುವ ಸೂಚನೆಯಾಗಿ ನಾಳೆ ತೆಗೆದುಕೊಳ್ಳೋಣ.

ಗಮನ ಸೆಳೆಯುವ ಸೂಚನೆ

ತೋಟಗಾರಿಕೆ ಇಲಾಖೆಯಲ್ಲಿ ಹಣ ದುರುಪಯೋಗ

ಶ್ರೀ ಬಿ. ಆರ್. ನೀಲಕಂಠಪ್ಪ.—ನಾನು ಮಾನ್ಯ ತೋಟಗಾರಿಕಾ ಸಚಿವರ ಗಮನವನ್ನು ಅವರ ಇಲಾಖೆಯಲ್ಲಿ ನಡೆದ ಹಣ ದುರುಪಯೋಗದ ಬಗ್ಗೆ ಗಮನ ಸೆಳೆಯುತ್ತಿದೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕಾ ರಾಜ್ಯ ಸಚಿವರು).— ಲಾಲಬಾಗಿನ ಮೈಸೂರು ಉದ್ಯಾನಕಲಾ ಸಂಘವು ೧೯೧೫ನೇ ವರ್ಷದಲ್ಲಿ ಕೀರ್ತಿಶೇಷ ಜಿ. ಹೆಚ್. ಕೈಬಿಗಲ್‌ರವರಿಂದ ಸ್ಥಾಪಿಸಲ್ಪಟ್ಟಿದ್ದು, ಅಂದಿನಿಂದಲೂ ರಾಜ್ಯ ತೋಟಗಾರಿಕೆ ಅಭಿವೃದ್ಧಿಗೆ ಶ್ರಮಿಸುತ್ತಿದೆ.

ಸಂಘದ ಮುಖ್ಯ ಉದ್ದೇಶಗಳು ಈ ಕೆಳಗಿನಂತಿವೆ

ಅ) ರಾಜ್ಯಾದ್ಯಂತ ತೋಟಗಾರಿಕೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವುದು.

ಆ) ತೋಟಗಾರಿಕೆಯ ಅಭಿವೃದ್ಧಿ ಮತ್ತು ವಿಸ್ತರಣೆಗೆ ಅಗತ್ಯವಾದ ಸಭೆಗಳು, ಭಾಷಣಗಳು ಪ್ರಾತ್ಯಕ್ಷಿಕೆಗಳು ಪುಸ್ತಕಗಳು ಇತ್ಯಾದಿಗಳ ವಿಸ್ತಾರಣೆ.

ಇ) ವಿಶೇಷ ಅಲಂಕಾರಿಕ ಸಸ್ಯಗಳನ್ನು ಎಲ್ಲ ಕಾಲಗಳಲ್ಲಿಯೂ ಬೆಳೆಯಲು ಪ್ರೋತ್ಸಾಹ ನೀಡಲು ವರ್ಷಕ್ಕೊಮ್ಮೆ ಭಾರಿ ವಿಶೇಷ ಫಲಪುಷ್ಪ ಪ್ರದರ್ಶನಗಳ ವಿಸ್ತಾರ.

ಈ) ಸಂಘದ ಸದಸ್ಯರಿಗೆ ತೋಟಗಾರಿಕೆಯ ಬಗ್ಗೆ ತಾಂತ್ರಿಕ ತಿಳುವಳಿಕೆಯನ್ನು ನೀಡುವುದು.

ಉ) ಮತ್ತು ಮಾಟ್ಟಿಗ ರಾಜ್ಯ ಹಾಗೂ ಕೇಂದ್ರ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ತೋಟಗಳು ಖಾಸಗಿ ತೋಟಗಳು ಮನೆಗಳಂಕಟ್ಟಿ ತೋಟಗಳು ಮತ್ತಿತರ ಖಾಸಗಿ ಅಲಂಕಾರಿಕ ಉದ್ಯಾನಗಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸುವುದು.

ಮೈಸೂರು ಉದ್ಯಾನ ಕಲಾ ಸಂಘವು ರಾಜ್ಯ ಸಂಘಗಳ ದಾಖಲಾತಿ ಕಾಯಿದೆಗನುಗುಣವಾಗಿ ನೋಂದಾಯಿಸಲ್ಪಟ್ಟಿದೆ. ಸ್ವಾತಂತ್ರ್ಯ ಪೂರ್ವದಿನಗಳಲ್ಲಿ ಅಂದಿನ ಬ್ರಿಟಿಷ್ ರೆಸಿಡೆಂಟ್‌ರವರು ಪದಾಧಿ ಅಧ್ಯಕ್ಷರಾಗಿಯೂ ಮತ್ತು ಅಂದಿನ ಮೈಸೂರು ರಾಜ್ಯದ ದಿವಾನರು ಉಪಾಧ್ಯಕ್ಷರಾಗಿಯೂ